# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ಇವರ ನಡುವಳಿಗಳು

**ವಿಷಯಃ** ಕೇಂದ್ರ ಅಬಿಲೇಖನಾಲಯದಲ್ಲಿ ಸಂಗ್ರಹಿಸಿದ ನಿಖಾಲಿಯಾದ/ಅವಧಿ ಮುಗಿದ ಕಡತಗಳನ್ನು ನಾಶಪಡಿಸುವ/ಹರಿದು ಹಾಕುವ ಕುರಿತು....

ಮೇಲ್ಕಾಣಿಸಿದ ವಿಷಯದನ್ವಯ, ನಾನು ನಿರ್ದೇಶಿಸುವುದೇನೆಂದರೆ, ಜಿಲ್ಲಾ ನ್ಯಾಯಾಲಯ, ಧಾರವಾಡ ಕೇಂದ್ರ ದಾಖಲೆ ಕೊಠಡಿ ವಿಭಾಗದಲ್ಲಿ ಅವಧಿ ಮುಗಿದ ಕಡತಗಳು ಅಂದರೆ ಧಾರವಾಡ ಜಿಲ್ಲಾ ನ್ಯಾಯಾಲಯದ ಮತ್ತು ಅಧೀನ ನ್ಯಾಯಾಲಯಗಳ ಕಡತಗಳನ್ನು ಅಂದರೆ 2010ನೇ ಇಸ್ವಿಯಿಂದ 2015ನೇ ಇಸ್ವಿಯವರೆಗೆ ಸೀಮಿತವಾಗಿ ಕಡತಗಳನ್ನು ನಾಶಪಡಿಸಲು (ಹರಿದು ಹಾಕಲು) ತೀರ್ಮಾನಿಸಲಾಗಿದೆ.

ಆದಕಾರಣ, ಎಲ್ಲಾ ಕಕ್ಷಿದಾರರಿಗೆ ಹಾಗೂ ನ್ಯಾಯವಾದಿಗಳಿಗೆ/ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಖಂಡಿಕೆ.1ನೇದ್ದರನ್ವಯ (ಪ್ಯಾರಾ) ಸಂಬಂದಪಟ್ಟಂತೆ ಮೇಲಿನ ಇಸ್ವಿಗೆ ಸಂಬಂದಪಟ್ಟಂತೆ ಎಲ್ಲಾ ನಮೂನೆಯ ಕಡತ **"ಎ"** ಹೊರತುಪಡಿಸಿ ಉಳಿದ ಕಡತ **"ಬಿ" "ಸಿ"** ಗಳಲ್ಲಿ ಹಾಜರುಪಡಿಸಿದ ಮೂಲ ದಸ್ತಾವೇಜುಗಳು, ಅಸಲು ಖರೀದಿಪತ್ರ, ಮೃತ್ಯುಪತ್ರ, ವಾಟ್ನಿಪತ್ರ, ಇನ್ನೀತರೆ ಸರ್ಕಾರಿ ವಹಿ, ಇತ್ಯಾದಿಗಳನ್ನು ಸಂಬಂದಪಟ್ಟವರು ಮರಳಿ ಹಿಂಪಡೆಯಲು ಸೂಚಿಸಲಾಗಿದೆ.

ಸದರಿ ಕಡತಗಳನ್ನು ನಾಶಪಡಿಸಿದ ನಂತರ ಈ ಕ್ರಮಕ್ಕೆ ದಾಖಲೆ ಕೊಠಡಿ ಸಂಗ್ರಹಣ ವಿಭಾಗ ಹೊಣೆಗಾರರಾಗಲು ಬರುವುದಿಲ್ಲ ಹಾಗೂ ಸದರಿ ನಾಶಪಡಿಸುವ ಕಡತಗಳನ್ನು ದಿನಾಂಕ 30.11.2025 ರೊಳಗೆ ಮರಳಿ ಪಡೆಯಲು ಅವಕಾಶವಿರುತ್ತದೆ.

ಪ್ರಧಾನ ಜಿಲ್ಲಾ ನ್ಯಾಯಾಧೀಶರು,
ಧಾರವಾಡ.

ಪ್ರತಿಗಳನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿಃ-

01. ಮಾನ್ಯ ಪ್ರಧಾನ ಹಿರಿಯ ದಿವಾಣಿ ಮತ್ತು ಜೆ.ಎಂ.ಎಫ್.ಸಿ., ಹುಬ್ಬಳ್ಳಿ,
02. ಮಾನ್ಯ ಪ್ರಧಾನ ಕಿರಿಯ ದಿವಾಣಿ ಮತ್ತು ಜೆ.ಎಂ.ಎಫ್.ಸಿ., ಹುಬ್ಬಳ್ಳಿ,
03. ಮಾನ್ಯ ಪ್ರಧಾನ ದಿವಾಣಿ ನ್ಯಾಯಾಲಯ ಮತ್ತು ಮುಖ್ಯ ದಂಡಾಧಿಕಾರಿಗಳು, ಧಾರವಾಡ,
04. ಮಾನ್ಯ ಪ್ರಧಾನ ದಿವಾಣಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಧಾರವಾಡ,
05. ಮಾನ್ಯ ಪ್ರಧಾನ ದಿವಾಣಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ನವಲಗುಂದ,
06. ಮಾನ್ಯ ಪ್ರಧಾನ ದಿವಾಣಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.ಕಲಘಟಗಿ,
07 ಮಾನ್ಯ ಪ್ರಧಾನ ದಿವಾಣಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.ಕುಂದಗೋಳ,
08. ಮಾನ್ಯ ಅಧ್ಯಕ್ಷರು, ವಕೀಲರ ಸಂಘ, ಧಾರವಾಡ,
09. ಮಾನ್ಯ ಅಧ್ಯಕ್ಷರು, ವಕೀಲರ ಸಂಘ, ಹುಬ್ಬಳ್ಳಿ,
10. ಮಾನ್ಯ ಅಧ್ಯಕ್ಷರು, ವಕೀಲರ ಸಂಘ, ನವಲಗುಂದ,
11. ಮಾನ್ಯ ಅಧ್ಯಕ್ಷರು, ವಕೀಲರ ಸಂಘ, ಕಲಘಟಗಿ,
12. ಮಾನ್ಯ ಅಧ್ಯಕ್ಷರು, ವಕೀಲರ ಸಂಘ, ಕುಂದಗೋಳ.

ಪ್ರಧಾನ ಜಿಲ್ಲಾ ನ್ಯಾಯಾಧೀಶರು,
ಧಾರವಾಡ.